
# ಉದ್ಯೋಗದ ಹಕ್ಕಿಗಾಗಿ
# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ – 2005







ಪ್ರಕಾಶನಕ್ಕೆ ಸಹಕಾರ
ಕಾರಿಥಾಸ್ ಇಂಡಿಯಾ, ನವದೆಹಲಿ

ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರಕಟಣೆ :
ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್
ಸೋಶಿಯಲ್ ಸರ್ವೀಸ್ (ಕ್ರಾಸ್)
ಬೆಂಗಳೂರು – 560084

Caritas INDIA
The Joy of Service...

# ಉದ್ಯೋಗದ ಹಕ್ಕಿಗಾಗಿ

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ

ದುಡಿಮೆಯ ಹಕ್ಕನ್ನು ತಂದುಕೊಟ್ಟ ಈ ಕಾಯಿದೆಯು 07–09–2005ರಿಂದ ಭಾರತದಲ್ಲಿ ಜಾರಿಗೆ ಬಂದಿದೆ. ದುಡಿಯುವ ಕೈಗಳಿಗೆ ಕೆಲಸ, ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ. ಮಾನವ ಸಂಪನ್ಮೂಲದ ವೈಜ್ಞಾನಿಕ ಬಳಕೆ ಮತ್ತು ತನ್ಮೂಲಕ ಅಭಿವೃದ್ಧಿ ಎಂಬುದೇ ಈ ಕಾಯಿದೆಯ ಮುಖ್ಯ ಕಾಳಜಿಯಾಗಿದೆ. ಕರ್ನಾಟಕದಲ್ಲಿ ಈ ಕಾಯಿದೆಯನ್ನು ಮೊದಲ ಹಂತದಲ್ಲಿ ರಾಜ್ಯದ ಬೀದರ್, ಗುಲ್ಬರ್ಗ, ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ದಿನಾಂಕ 01–04–2006ರಿಂದ ಜಾರಿಯಲ್ಲಿ ತರಲಾಯಿತು. ಎರಡನೇ ಹಂತದಲ್ಲಿ ರಾಜ್ಯದ ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ದಿನಾಂಕ 01–04–2007ರಿಂದ ವಿಸ್ತರಿಸಲಾಯಿತು. ಸದ್ಯ ರಾಜ್ಯದ ಉಳಿದ ಜಿಲ್ಲೆಗಳಿಗೂ ದಿನಾಂಕ 01–04–2008ರಿಂದ ಸದರಿ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. ಈಗ ಸಂಪೂರ್ಣ ಕರ್ನಾಟಕದ ಪ್ರತಿ ಗ್ರಾಮ ಪಂಚಾಯಿತಿಗೂ ಈ ಕಾಯಿದೆ ಅನ್ವಯವಾಗುತ್ತದೆ.

## ಉದ್ಯೋಗ ಖಾತರಿ ಕಾಯಿದೆಯ ಉದ್ದೇಶಗಳು



- ಸ್ವ–ಇಚ್ಛೆಯಿಂದ ಕೆಲಸ ಬಯಸಿ ಅರ್ಜಿ ಸಲ್ಲಿಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಕೆಲಸ ನೀಡುವುದು. ದುಡಿಯುವ ಜನರು ಕೆಲಸವನ್ನರಸಿ ವಲಸೆ ಹೋಗದಂತೆ ತಡೆಗಟ್ಟುವುದು.
- ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೂ 100 ದಿನಗಳ ಉದ್ಯೋಗವನ್ನು ಒದಗಿಸುವ ಮೂಲಕ ಗ್ರಾಮೀಣ ಜನತೆಯ ಜೀವನಕ್ಕೆ ಭದ್ರತೆ ಒದಗಿಸುವುದು.
- ಗ್ರಾಮೀಣ ಜನರಿಗೆ ದೀರ್ಘಕಾಲದ ಜೀವನೋಪಾಯದ ಮಾರ್ಗಗಳನ್ನು ಬಲಪಡಿಸುವುದು.
- ಗ್ರಾಮದ ನೆಲ, ಜಲ, ಅರಣ್ಯ ಸಂಪತ್ತು ಮತ್ತು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.

## ಉದ್ಯೋಗ ಪಡೆಯುವ ಹಕ್ಕು ಮತ್ತು ಅವಕಾಶಗಳು

- ಗ್ರಾಮೀಣ ಪ್ರದೇಶ ಪ್ರತಿ ಕುಟುಂಬದ ವಯಸ್ಕ ಸದಸ್ಯರು ಅಕುಶಲ ದೈಹಿಕ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಹಕ್ಕು.
- ಪ್ರತಿ ಕುಟುಂಬವು ಒಂದು ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳ ಕೆಲಸಕ್ಕಾಗಿ ಅರ್ಜಿ ಸಲ್ಲಿಸುವ ಹಕ್ಕು.
- ಅವಿಭಕ್ತ ಕುಟುಂಬವಾಗಿದ್ದಲ್ಲಿ ವಯಸ್ಕ ದಂಪತಿಗಳು ಮತ್ತು ಅವರ ಮಕ್ಕಳನ್ನು ಒಂದು ಕುಟುಂಬವೆಂದು ಪರಿಗಣಿಸಬೇಕು.
- ಅಕುಶಲ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಉದ್ಯೋಗ ಒದಗಿಸದಿದ್ದಲ್ಲಿ ಅರ್ಜಿದಾರರು ಆರ್ಥಿಕ ವರ್ಷದ ಮೊದಲ 30 ದಿನಗಳಿಗೆ ಕೂಲಿಯ ಶೇ.25ರಷ್ಟು ಮತ್ತು ಉಳಿದ ಅವಧಿಗೆ ಶ್ ೀ . 50ರಷ್ಟು ನಿರುದ್ಯೋಗ ಭತ್ಯೆಯನ್ನು ಪಡೆಯುವ ಹಕ್ಕು.
- ಸಾಧ್ಯವಾದಷ್ಟು ಮಟ್ಟಿಗೆ ಕೆಲಸಗಳನ್ನು ಆ ಗ್ರಾಮದ ವ್ಯಾಪ್ತಿಯಲ್ಲಿ ಒದಗಿಸಬೇಕು. ಕೂಲಿ ಕಾರ್ಮಿಕರು ವಾಸವಿರುವ ಗ್ರಾಮದಿಂದ 5 ಕಿ.ಮೀ.ಗಿಂತ ಹೆಚ್ಚಿನ ದೂರದಲ್ಲಿ ಕೆಲಸವನ್ನು ಒದಗಿಸಿದಾಗ, ನಿಗದಿತ ಕೂಲಿ ದರದ ಶೇ.10ರಷ್ಟನ್ನು ಹೆಚ್ಚುವರಿಯಾಗಿ ಪಡೆಯುವ ಹಕ್ಕು.
- ಉದ್ಯೋಗ ನೀಡುವಲ್ಲಿ ಮಹಿಳೆಯರಿಗೆ ಆದ್ಯತೆ.



- ಮಹಿಳೆ–ಪುರುಷ ಎಂಬ ತಾರತಮ್ಯ ಮಾಡದೆ ಸಮಾನ ವೇತನ ಅಧಿನಿಯಮ 1976 (25/1976)ರ ಅನ್ವಯ ಸಮಾನ ಕೂಲಿ ಪಡೆಯುವ ಹಕ್ಕು.
- ಕಾಯ್ದೆಯಡಿ ಕೆಲಸ ನಿರ್ವಹಿಸುವ 60 ವಯೋಮಾನ ಮೀರಿದವರು ಹಾಗೂ ಅಂಗವಿಕಲರಿಗೆ ಕೆಲಸದ ಪರಿಮಾಣದಲ್ಲಿ ಶೇ.25ರಷ್ಟು ರಿಯಾಯಿತಿ ಪಡೆಯುವ ಹಕ್ಕು.

**ಕಾಮಗಾರಿಯ ಸ್ಥಳದ ಸಮೀಪ ಇರಬೇಕಾದ ವ್ಯವಸ್ಥೆಗಳು, ಸೌಲಭ್ಯಗಳು**

- ಸ್ವಚ್ಛವಾದ ಕುಡಿಯುವ ನೀರಿನ ವ್ಯವಸ್ಥೆ
- ಮಕ್ಕಳು ಮತ್ತು ಕಾರ್ಮಿಕರ ವಿಶ್ರಾಂತಿಗಾಗಿ ನೆರಳಿನ ವ್ಯವಸ್ಥೆ
- ಪ್ರಥಮ ಚಿಕಿತ್ಸೆ ಪೆಟ್ಟಿಗೆಯ ವ್ಯವಸ್ಥೆ
- ಕಾಮಗಾರಿ ಸ್ಥಳಕ್ಕೆ ಆರು ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳು ಕಾರ್ಮಿಕರೊಂದಿಗೆ ಬಂದಲ್ಲಿ ಐದು ಮಕ್ಕಳಿಗೆ ಒಬ್ಬರಂತೆ ಕಾರ್ಮಿಕರ ಪೈಕಿ, ಒಬ್ಬ ಮಹಿಳೆಯನ್ನು ನೋಡಿಕೊಳ್ಳಲು ನೇಮಿಸಬೇಕು. ಅವಳಿಗೂ ದಿನದ ಕೂಲಿಯನ್ನು ಪಾವತಿಸಬೇಕು.



- ಕಾರ್ಮಿಕರಿಗೆ ಉಚಿತ ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು.
- ಕಾಮಗಾರಿ ನಡೆಯುವ ಅವಧಿಯಲ್ಲಿ ಅಸ್ವಸ್ಥರಾದಲ್ಲಿ ಅವರಿಗೆ ಕೂಡಲೇ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಬೇಕು. ಚಿಕಿತ್ಸೆ ಪಡೆಯುವ ಅವಧಿಗೆ ಪ್ರತಿ ದಿನಕ್ಕೆ 3 ದಿನದ ಕೂಲಿಯ ಸೇ.50ರಷ್ಟು ಕೂಲಿಯನ್ನು ದಿನಭತ್ಯೆಯಾಗಿ ಪಾವತಿಸಬೇಕು.
- ಕಾಮಗಾರಿ ನಡೆಯುವ ಸಂದರ್ಭದಲ್ಲಿ ಅವಘಡ ನಡೆದು ಕಾರ್ಮಿಕರು ಶಾಶ್ವತವಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ ಸಂದರ್ಭಕ್ಕೆ ತಕ್ಕಂತೆ ಅವರು ಅಥವಾ ಅವರ ವಾರಸುದಾರರು ರೂ.25,000/– ಅಥವಾ ಕೇಂದ್ರ ಸರಕಾರ ನಿಗದಿಪಡಿಸಬಹುದಾದ ಪರಿಹಾರ ಪಡೆಯಲು ಹಕ್ಕಿದೆ.
- ಈ ಕಾರ್ಮಿಕರ ಮಗುವಿಗೆ ಗಾಯಗಳಾದಲ್ಲಿ ಅಥವಾ ಶಾಶ್ವತ ಅಂಗವಿಕಲತೆಯಾದಲ್ಲಿ ಅಥವಾ ಮೃತಪಟ್ಟಲ್ಲಿ ಅವರು ಸಹ ಚಿಕಿತ್ಸೆ ಮತ್ತು ಪರಿಹಾರ ಪಡೆಯಲು ಹಕ್ಕು ಹೊಂದಿರುತ್ತಾರೆ.
- ಮೊದಲು ಉದ್ಯೋಗದ ಚೀಟಿ (ಜಾಬ್ ಕಾರ್ಡ್) ಪಡೆಯಬೇಕು.
- ಉದ್ಯೋಗ ಚೀಟಿ ಪಡೆಯಲೆಂದು ನಮೂನೆ–1ರಲ್ಲಿ ಕುಟುಂಬದ ವಯಸ್ಕ ಮತ್ತು ಕೆಲಸ ಮಾಡಲು ಸಿದ್ಧವಿರುವ ಎಲ್ಲ ಸದಸ್ಯರ ಹೆಸರು, ವಿಳಾಸ, ವಯಸ್ಸು ಇತ್ಯಾದಿಗಳನ್ನು ಭರ್ತಿ ಮಾಡಿ ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ಒಂದು ಪ್ರತಿಯಲ್ಲಿ ಸ್ವೀಕೃತಿ ದಿನಾಂಕ, ಸೀಲು (ಮೊಹರು)ಗಳನ್ನು ಪಡೆದುಕೊಂಡು ತಮ್ಮ ಬಳಿಯಲ್ಲಿ ಇಟ್ಟುಕೊಳ್ಳಬೇಕು.
- ಪ್ರತಿ ಕುಟುಂಬಕ್ಕೆ ಪ್ರತ್ಯೇಕ ಸಂಖ್ಯೆಯಿರುವ ಕುಟುಂಬದ ಉದ್ಯೋಗ ಚೀಟಿಯನ್ನು ಪಡೆದುಕೊಳ್ಳಬೇಕು.
- ಈ ಉದ್ಯೋಗ ಚೀಟಿಯಲ್ಲಿ ಸ್ಟಾಂಪ್ ಅಳತೆಯ ಭಾವಚಿತ್ರ (ಫೋಟೋ)ಗಳನ್ನು ಅಂಟಿಸಬೇಕು. ಈ ಫೋಟೋಗಳಿಗಾಗಿ ಕಾರ್ಮಿಕರಿಂದ ಪ್ರತ್ಯೇಕ ಹಣ ಪಡೆಯುವಂತಿಲ್ಲ.
- ಆಕಸ್ಮಿಕವಾಗಿ ಈ ಉದ್ಯೋಗ ಚೀಟಿ ಕಳೆದುಹೋದಲ್ಲಿ ಅಥವಾ ಹರಿದು ಹೋದಲ್ಲಿ ಉದ್ಯೋಗ ಚೀಟಿಯ ನಕಲು ಪ್ರತಿ ಪಡೆಯಬಹುದು. ನಕಲು ಪ್ರತಿಗಾಗಿ ಗ್ರಾಮ ಪಂಚಾಯಿತಿಗೆ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದು.
- ಉದ್ಯೋಗಕ್ಕಾಗಿ ಮಾಡಿದ ಈ ನೋಂದಾವಣಿ ಕನಿಷ್ಠ 5 ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ನಂತರದಲ್ಲಿ ಗ್ರಾಮ ಪಂಚಾಯಿತಿಗೆ ಅವಶ್ಯವೆನಿಸಿದಲ್ಲಿ ಉದ್ಯೋಗ ಚೀಟಿಯನ್ನು ನವೀಕರಿಸಬಹುದಾಗಿದೆ.
- ಉದ್ಯೋಗಾಕಾಂಕ್ಷಿಯು ತಪ್ಪು ಮಾಹಿತಿ ನೀಡಿ ನೋಂದಾಯಿಸಿಕೊಡಿದ್ದಲ್ಲಿ ಅಂತಹವರನ್ನು ವಜಾಗೊಳಿಸಲು ಅವಕಾಶವಿದೆ.
- ಉದ್ಯೋಗ ಚೀಟಿ (ಜಾಬ್ ಕಾರ್ಡ್) ಹೊಂದಿರುವವರು ವೈಯಕ್ತಿಕವಾಗಿ ಅಥವಾ ಒಟ್ಟಾಗಿ ಉದ್ಯೋಗದ

ಬೇಡಿಕೆಯ ವಿವರಗಳನ್ನು ದಾಖಲಿಸಿ ನಮೂನೆ–6ರಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿಯ ಎರಡು ಪ್ರತಿಗಳನ್ನು ಮಾಡಿ ಒಂದು ಪ್ರತಿಯನ್ನು ಪಂಚಾಯಿತಿಗೆ ಸಲ್ಲಿಸಿ ಇನ್ನೊಂದು ಪ್ರತಿಯಲ್ಲಿ ಅರ್ಜಿ ಸಲ್ಲಿಸಿದ ಸ್ವೀಕೃತಿ ದಿನಾಂಕ ಮತ್ತು ಪಂಚಾಯಿತಿಯ ಮೊಹರು (ಸೀಲು) ಬರೆಯಿಸಿಕೊಂಡು ಅರ್ಜಿದಾರರು ತಮ್ಮ ಬಳಿ ಇಟ್ಟುಕೊಂಡಿರಬೇಕು.

- ಒಂದು ವರ್ಷದ ಅವಧಿಯಲ್ಲಿ ನಿಗದಿತ ಅವಧಿಗೆ ಉದ್ಯೋಗವನ್ನು ಬಯಸಿ ಮುಂಗಡ ಅರ್ಜಿಯನ್ನು ಸಲ್ಲಿಸಬಹುದು.
- ಒಬ್ಬನೇ ವ್ಯಕ್ತಿ ಅಥವಾ ಗುಂಪು ಒಂದು ಬಾರಿ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಹುದು. ಆದರೆ ಇವುಗಳಲ್ಲಿನ ಕೆಲಸದ ಬೇಡಿಕೆಯ ಅವಧಿ ಬೇರೆ ಬೇರೆಯಾಗಿರಬೇಕು.
- ಕಾರ್ಯಕ್ರಮ ಅಧಿಕಾರಿ / ಗ್ರಾಮ ಪಂಚಾಯಿತಿ ನಿಗದಿಪಡಿಸಿದ ಯಾವುದೇ ಕೆಲಸವನ್ನು ಉದ್ಯೋಗ ಪಡೆಯುವವರು ತಿರಸ್ಕರಿಸುವಂತಿಲ್ಲ.
- ಅಂಗವಿಕಲ ಮತ್ತು ಹಿರಿಯ ವ್ಯಕ್ತಿಗಳಿಗೆ ಕಾಯ್ದೆಯಲ್ಲಿ ನಮೂದಿಸಿರುವಂತೆ ಸೂಕ್ತ ಕೂಲಿ ಕೆಲಸಗಳನ್ನು ವಹಿಸಬೇಕು.

## ಕೆಲಸ ನೀಡದಿದ್ದರೆ ನಿರುದ್ಯೋಗ ಭತ್ಯೆ

- ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಗ್ರಾಮ ಪಂಚಾಯಿತಿ ಕೆಲಸ ನೀಡಬೇಕು. ಇಲ್ಲದೆ ಹೋದಲ್ಲಿ ಕಾಯ್ದೆ ಅನ್ವಯ ನಿರುದ್ಯೋಗ ಭತ್ಯೆಗಾಗಿ ಕಾರ್ಮಿಕರು ಪಂಚಾಯಿತಿಗೆ ಅರ್ಜಿ ಸಲ್ಲಿಸಬೇಕು.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿ (ಸೆಕ್ರೆಟರಿ) ಈ ಅರ್ಜಿಗಳನ್ನು ಪರಿಶೀಲಿಸಿ ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸಬೇಕು.
- ಕಾರ್ಯಕ್ರಮ ಅಧಿಕಾರಿಯ ಅರ್ಹರಿದ್ದಲ್ಲಿ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡುತ್ತಾರೆ.

## ಕೆಲಸದ ಕೂಲಿ ಹಣ

- ಉದ್ಯೋಗ ಚೀಟಿ ಪಡೆಯುವ ಹಂತದಲ್ಲಿಯೇ ಪ್ರತಿ ಕುಟುಂಬವು ರಾಷ್ಟ್ರೀಕೃತ ಬ್ಯಾಂಕು ಅಥವಾ ಪೋಸ್ಟ್ ಆಫೀಸ್‌ನಲ್ಲಿ ಅಕೌಂಟ್ (ಚಾಲ್ತಿಖಾತೆ) ತೆಗೆಸಬೇಕು. ಈ ಅಕೌಂಟನ್ನು ಶೂನ್ಯ ಠೇವಣಿಯಲ್ಲಿ ಪಂಚಾಯಿತಿ ಸಿಬ್ಬಂದಿಯವರೆ ತೆಗೆಸಿ ಕಾರ್ಮಿಕರಿಗೆ ಪಾಸ್ ಬುಕ್ ಕೊಡಬೇಕು.
- ಅಂದಂದಿನ ಕೆಲಸದ ಹಾಜರಾತಿ ಮತ್ತು ಪ್ರಮಾಣವನ್ನು ಉದ್ಯೋಗ ಮಿತ್ರರು (MATE) ಹಾಜರಾಗಿ ಪಟ್ಟಿಯಲ್ಲಿ (NMR) ತುಂಬಬೇಕು. ಅದರೊಟ್ಟಿಗೆ ಕಾಮಗಾರಿಯ ಅಳತೆಗಳನ್ನು ಅಳತೆ ಪುಸ್ತಕದಲ್ಲಿ (measurement book) ದಾಖಲಿಸಬೇಕು (ಸೂಚನೆ: ಕರ್ನಾಟಕದಲ್ಲಿ 'ಉದ್ಯೋಗ ಮಿತ್ರ' ನನ್ನು 'ಕಾರ್ಯಬಂಧು' ಹೆಸರಿನಲ್ಲಿ ಕರೆಯಲಾಗುತ್ತಿದೆ).



- ಈ ಎಲ್ಲ ವಿವರಗಳನ್ನು ಗ್ರಾಮ ಪಂಚಾಯಿತಿಯ ಕಂಪ್ಯೂಟರ್ ಆಪರೇಟರ್‌ಗೆ ಒಪ್ಪಿಸಬೇಕು. ಅವರು ಅವುಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಕಂಪ್ಯೂಟರಿನಲ್ಲಿ ತೊಂಬಿಸಬೇಕು.
- ಈಗ ನೇರ ಸಂಪರ್ಕ ಜಾಲ (online) ಇರುವುದರಿಂದ MIS ಮೂಲಕ ಹಣಕಾಸು ನಿರ್ವಹಣಾ ವಿಭಾಗಕ್ಕೆ ಮಾಹಿತಿ ತಲುಪುತ್ತದೆ. ಅವರು ವಿವರಗಳನ್ನು ಪರಿಶೀಲಿಸಿ ಅವಶ್ಯಕತೆ ಇದ್ದಷ್ಟು ಹಣವನ್ನು ಆಯಾ ಪಂಚಾಯಿತಿ ಖಾತೆಗೆ ವರ್ಗಾಯಿಸುತ್ತಾರೆ. ಪಂಚಾಯಿತಿ ಖಾತೆಯಿಂದ ಕಾರ್ಮಿಕರ ದುಡಿತದ ಪ್ರಮಾಣ ಮತ್ತು ಹಾಜರಾತಿಯ ಲೆಕ್ಕದಂತೆ ಅವರ ಖಾತೆಗೆ ನೇರವಾಗಿ ಹಣ ಜಮಾವಣೆಯಾಗುತ್ತದೆ. ತಮ್ಮ ತಮ್ಮ ದುಡಿಮೆಯ ಹಣವನ್ನು ಪಡೆದುಕೊಳ್ಳಬೇಕು.
- ಅಂದಂದಿನ ದುಡಿಮೆಯ ಹಾಜರಾತಿ ಮತ್ತು ಪ್ರಮಾಣವನ್ನು ಸರಿಯಾಗಿ ನಮೂದಿಸುವಂತೆ ಉದ್ಯೋಗ ಮಿತ್ರನಿಗೆ (MATE) ಹೇಳಬೇಕು.

- ಕನಿಷ್ಠ ದಿನಗೂಲಿ ಒಬ್ಬರಿಗೆ ಸದ್ಯ 155/– ರೂಪಾಯಿಯಂತೆ (ದಿನಗೂಲಿ ಕಾಲಕಾಲಕ್ಕೂ ಪರಿಷ್ಕೃತವಾದಂತೆ) ಕೊಡಬೇಕು.
- ಇದರೊಂದಿಗೆ ಕೆಲಸ ಮಾಡಲು ಬೇಕಾದ ಸಲಕರಣೆಗಳ (ಬುಟ್ಟಿ, ಹಾರೆ, ಪಿಕಾಸಿ, ಸಲಿಕೆ, ಗುದ್ದಲಿ) ಬಾಡಿಗೆ ಎಂದು ದಿನವೊಂದಕ್ಕೆ 3/– ರೂಪಾಯಿಯಂತೆ ಸೇರಿಸಬೇಕು.
- ಮಹಿಳೆ–ಪುರುಷರಿಬ್ಬರಿಗೂ ಸಮಾನ ಕೂಲಿ ದೊರೆಯುತ್ತದೆ.
- ಪ್ರತಿ ವಾರಾಂತ್ಯದಲ್ಲಿ ಕೂಲಿ ಪಾವತಿ ಮಾಡಬೇಕು. ತಪ್ಪಿದರೆ 15 ದಿನಕ್ಕೊಮ್ಮೆಯಾದರೂ ಕೂಲಿ ಪಾವತಿ
- ಕುಟುಂಬದ ಯಾರೇ ಗಳಿಸಿದ ಮಜೂರಿ ಹಣವನ್ನು ಕುಟುಂಬದ ಜಂಟಿ ಉಳಿತಾಯ ಖಾತೆಗೆ ಜಮಾ ಮಾಡಬೇಕು.
- ಕಾರ್ಯ ನಿರ್ವಹಣಾ ಏಜೆನ್ಸಿ, ಯಾವುದಾದರೂ, ಕಾರ್ಮಿಕರ ಕೂಲಿಯನ್ನು ಗ್ರಾಮ ಪಂಚಾಯಿತಿ ಮೂಲಕವೇ ಪಾವತಿಸಬೇಕು.
- ಸಾಮರ್ಥ್ಯವಿದ್ದ ಕಾರ್ಮಿಕರು ದಿನವೊಂದಕ್ಕೆ ನಿಗದಿಪಡಿಸಿದ ಪ್ರಮಾಣಕ್ಕಿಂತಲೂ ಹೆಚ್ಚುವರಿ ಕೆಲಸ ಮಾಡಿ ಹೆಚ್ಚಿನ ಕೂಲಿ ಪಡೆಯಲು ಅವಕಾಶವಿದೆ. ಆದರೆ ಹೆಚ್ಚುವರಿ ದುಡಿಮೆಯ ಪ್ರಮಾಣವು ದಿನವೊಂದಕ್ಕೆ ರೂ.125/– ಮೀರದಂತೆ ಗರಿಷ್ಠ ಮಿತಿಯನ್ನು ನಿಗದಿಪಡಿಸಲಾಗಿದೆ.
- ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ನಿಗದಿಯಾಗಿರುವ ಮಹಿಳಾ ಕಾರ್ಮಿಕರಿಗೂ ದಿನವೊಂದರ ಕೂಲಿಯಂತೆ ಕೆಲಸ ಮಾಡಿದಷ್ಟು ದಿನಗಳ ಹಾಜರಾತಿ ನಮೂದಿಸಿ ಹಣವನ್ನು ಪಾವತಿಸಬೇಕು.
- ಸದರಿ ಯೋಜನೆಯಡಿಯಲ್ಲಿ ಪ್ರದೇಶವಾರು ಮತ್ತು ಕಾಮಗಾರಿಗಳ ಭಿನ್ನ ಸ್ವರೂಪಗಳನ್ನು ಅನುಸರಿಸಿ ಆಯಾ ಕೆಲಸಗಳಿಗೆ ಭಿನ್ನ ವಿಭಿನ್ನವಾದ ಅಳತೆ ಪ್ರಮಾಣವನ್ನು ಸರಕಾರ ನಿಗದಿಪಡಿಸಿದೆ.
- ಆಯಾ ಕಾಮಗಾರಿ ಕ್ಷೇತ್ರದ ಅಧಿಕಾರಿಗಳು; ಇಂಜಿನಿಯರ್ (ಜೆ.ಇ), ಪಿ,ಡಿ,ಓ., ಕಾರ್ಯದರ್ಶಿ ಮತ್ತು ಪಂಚಾಯಿತಿ ಪ್ರತಿನಿಧಿಗಳು ನಿಯಮಾನುಸಾರ ಅನ್ವಯವಾಗುವ ಕೆಲಸದ ಪ್ರಮಾಣವನ್ನು ಕಾರ್ಮಿಕರಿಗೆ ನೀಡಬೇಕು.
- ಗ್ರಾಮ ಸಭೆಗಳಲ್ಲಿ ಮತ್ತು ಉದ್ಯೋಗ ಖಾತರಿ ಕಾಯಿದೆ ಕುರಿತು ಮಾಹಿತಿ ನೀಡುವ ಸಂದರ್ಭಗಳಲ್ಲಿ ಕಾರ್ಮಿಕರಿಗೆ ಕೆಲಸದ ಸ್ವರೂಪ ಮತ್ತು ಪ್ರಮಾಣವನ್ನು ಕುರಿತು ಸರಕಾರಿ ಆದೇಶದಲ್ಲಿ ನೀಡಲಾದ ವಿವರಗಳನ್ನು ಸ್ಪಷ್ಟಪಡಿಸಬೇಕು.

1. **ಜಲ ಸಂರಕ್ಷಣೆ ಮತ್ತು ಮಳೆ ನೀರಿನ ಕೊಯ್ಲು:** ಕೆರೆ ನಿರ್ಮಾಣ ಮತ್ತು ಹೂಳೆತ್ತುವುದು. ತಡೆ ಅಣೆಕಟ್ಟು, ಜಿನುಗುಕೆರೆ, ಗೋಕಟ್ಟೆ, ತಿರುವು ಕಾಲುವೆ, ಕಾಂಟೂರ್ ಬಂಡಿಂಗ್, ತೋಡು ಬಾವಿಗಳ ನಿರ್ಮಾಣ, ಕುಡಿಯುವ ನೀರಿನ ಪುನಶ್ಚೇತನ, ಶಾಲೆಗಳಲ್ಲಿ ಹಾಗೂ ಮನೆಗಳಲ್ಲಿ ಮಳೆನೀರು ಸಂಗ್ರಹಣೆಯ ತೊಟ್ಟಿಗಳನ್ನು ನಿರ್ಮಿಸುವುದು.
2. **ಬರಗಾಲ ತಡೆಗಟ್ಟುವಿಕೆ:** ಅರಣ್ಯೀಕರಣ ಮಾಡುವುದು. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಶೇ.20ರಷ್ಟು ಪ್ರಮಾಣದಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎಸ್. ನಿಧಿಯನ್ನು ಗಿಡ ನೆಡುವ ಕಾರ್ಯಕ್ರಮಕ್ಕೆ ಬಳಸಬೇಕು.
3. **ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ ನೀರಾವರಿ ಕಾಲುವೆಗಳು:** ಕ್ಷೇತ್ರ ಕಾಲುವೆಗಳು, ಪೂರಕ ಕಾಲುವೆಗಳು, ಜಮೀನಿನ ಅಭಿವೃದ್ಧಿ / ತೋಟಗಾರಿಕೆ (ವೈಯಕ್ತಿಕ).
4. **ನೀರಾವರಿ ಸೌಲಭ್ಯ, ಜಮೀನಿನ ಅಭಿವೃದ್ಧಿ ಮತ್ತು ವೈಯುಕ್ತಿಕ ತೋಟಗಾರಿಕೆ:** ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಭೂ ಸುಧಾರಣೆ ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಜಮೀನುಗಳಿಗೆ ನೀರಾವರಿ, ತೋಟಗಾರಿಕೆ, ಕೃಷಿಹೊಂಡ ಮತ್ತು ಜಮೀನು ಅಭಿವೃದ್ಧಿ ಪಡಿಸುವುದು.
5. **ಸಾಂಪ್ರದಾಯಿಕ ನೀರು ತೊಟ್ಟಿಗಳ ಜೀರ್ಣೋದ್ಧಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದು:** ಕಲ್ಯಾಣಿಗಳು, ಸಮುದಾಯ ಕುಡಿಯುವ ನೀರಿನ ಬಾವಿಗಳು, ಗೋಕಟ್ಟೆಗಳಂತಹ ಸಾಂಪ್ರದಾಯಿಕ ನೀರು ನೆಲೆಗಳ ಜೀರ್ಣೋದ್ಧಾರ. ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗಾಗಿ ಕೇಂದ್ರ / ರಾಜ್ಯ ಗ್ರಾಮೀಣ ವಸತಿ ನಿರ್ಮಾಣ ಯೋಜನೆಗಳ ಫಲಾನುಭವಿಗಳ ಬಡಾವಣೆ, ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲಾ /

ಕಾಲೇಜುಗಳಿಗಾಗಿ ಆಟದ ಮೈದಾನ ಅಭಿವೃದ್ಧಿ. ಸರ್ಕಾರಿ ತೋಟಗಾರಿಕಾ ಫಾರಂ / ಕೃಷಿ ಫಾರಂಗಳು, ಮೀನುಗಾರಿಕಾ ಕೇಂದ್ರಗಳು, ಮೇವು ಕೇಂದ್ರಗಳು, ರೇಷ್ಮೆ ಸಾಕಾಣಿಕೆ ಕೇಂದ್ರಗಳ ಅಭಿವೃದ್ಧಿ, ರೈತ ಸಂತೆಗಳು ಇತ್ಯಾದಿಗಳಿಗಾಗಿ ಭೂಮಿಯನ್ನು ಅಭಿವೃದ್ಧಿ ಪಡಿಸುವುದು. ಕೇಂದ್ರ ಸರಕಾರದ ಸಮಗ್ರ ಕ್ರಿಯಾಯೋಜನೆ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ಆಟದ ಮೈದಾನಗಳ ನಿರ್ಮಾಣ.

6. **ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣಾ ಕಾಮಗಾರಿಗಳು:** ನೀರು ನಿಂತ ಪ್ರದೇಶಗಳಲ್ಲಿ ಚರಂಡಿ ನಿರ್ಮಾಣ ಮಾಡುವುದು.
7. **ಸರ್ವಋತು ಗ್ರಾಮೀಣ ರಸ್ತೆಗಳ ನಿರ್ಮಾಣ :** ರಸ್ತೆಗಳನ್ನು ಕೊನೆಯ ಆದ್ಯತೆಯಾಗಿ ಒಟ್ಟು ಮೊತ್ತದ ಶೇ10ಕ್ಕಿಂತ ಕಡಿಮೆ ಮೊತ್ತದಲ್ಲಿ ತೆಗೆದುಕೊಳ್ಳತಕ್ಕದ್ದು.
8. **ಭಾರತ್ ನಿರ್ಮಾಣ ರಾಜೀವ ಗಾಂಧಿ ಸೇವಾ ಕೇಂದ್ರ;** ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಭವನದ ಕಟ್ಟಡ ಹಾಗೂ ತಾಲ್ಲೂಕು ಮಟ್ಟದಲ್ಲಿ ಜ್ಞಾನ ಸಂಪನ್ಮೂಲ ಕೇಂದ್ರದ ನಿರ್ಮಾಣಕ್ಕೆ ಅವಕಾಶ.
9. **ವಿಶೇಷ ಸಂದರ್ಭಗಳಲ್ಲಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕೇಂದ್ರ** ಸರ್ಕಾರ ಅಧಿಸೂಚಿಸಿರುವ ಇತರ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು. ಕೃಷಿ ಜಮೀನು ಆಧರಿತ ಕಾಮಗಾರಿಗಳಾದ ಎರೆಹುಳು ಗೊಬ್ಬರ, ಜೈವಿಕ ಗೊಬ್ಬರ ಘಟಕ ನಿರ್ಮಾಣ, ಕೃಷಿ ಹೊಂಡ ನಿರ್ಮಾಣಕ್ಕೆ ಅವಕಾಶ. ನದೀಪ್ ಗೊಬ್ಬರ ತಯಾರಿಕಾ ಘಟಕಕ್ಕೆ ಅಕುಶಲ ಕೂಲಿ ಬಾಬ್ತು ರೂ.2,000/– ಹಾಗೂ ಸಾಮಗ್ರಿ ವೆಚ್ಚ ರೂ.6000/–, ಎರೆಹುಳು ಗೊಬ್ಬರ ಘಟಕಕ್ಕೆ ಅಕುಶಲ ಕೂಲಿಗಾಗಿ ರೂ.2,250/– ಹಾಗೂ ಸಾಮಗ್ರಿ ವೆಚ್ಚಕ್ಕಾಗಿ ರೂ,6,750/– ಮತ್ತು ದ್ರವ ಜೈವಿಕ ಗೊಬ್ಬರ ಘಟಕಕ್ಕೆ ರೂ.600/– ಕೂಲಿ ಮೊತ್ತ ರೂ.1,400/– ಸಾಮಗ್ರಿ ವೆಚ್ಚ ಬಳಸಿಕೊಳ್ಳಲು ಅವಕಾಶವಿದೆ.
10. **ಪಶುಸಂಗೋಪನೆಗೆ** ಸಂಬಂಧಿಸಿದಂತೆ ಕೋಳಿ ಸಾಕಾಣಿಕೆ ಶೆಡ್ಡು ನಿರ್ಮಾಣಕ್ಕೆ ರೂ.8,000/– ಅಕುಶಲ ಕೂಲಿ ಮೊತ್ತ ಹಾಗೂ ರೂ.32,000/– ಸಾಮಗ್ರಿ ವೆಚ್ಚ, ಮೇಕೆ ಸಾಗಾಣಿಕೆ ಶೆಡ್ಡು ನಿರ್ಮಾಣಕ್ಕೆ ರೂ.8,750/– ಅಕುಶಲ ಕೂಲಿ ಮೊತ್ತ ಮತ್ತು ರೂ.26,250/– ಸಾಮಗ್ರಿ ವೆಚ್ಚ, ಗಂಜಲ ಸಂಗ್ರಹ / ಮೇವು ತೊಟ್ಟಿ ನಿರ್ಮಾಣಕ್ಕೆ ರೂ.10,500/– ಅಕುಶಲ ಕೂಲಿ ಮೊತ್ತ ಹಾಗೂ ರೂ.24,500/– ಸಾಮಗ್ರಿ ವೆಚ್ಚ, ಅಜೋಲಾ ಗಿಡಗಳನ್ನು ಬೆಳೆಸುವ ತೊಟ್ಟಿ ನಿರ್ಮಾಣಕ್ಕೆ ರೂ.300/– ಅಕುಶಲ ಕೂಲಿ ಮೊತ್ತ ರೂ.1,700/– ಸಾಮಗ್ರಿ ವೆಚ್ಚ ಬಳೆಸಬಹುದಾಗಿದೆ.
11. **ಮೀನು ಸಾಕಾಣಿಕೆ:** ಸಾರ್ವಜನಿಕ ಕೆರೆಗಳಲ್ಲಿ ಮೀನು ಸಾಕಾಣಿಕೆಗೆ ಅಕುಶಲ ಕೂಲಿ ವೆಚ್ಚವಾಗಿ ರೂ.8.80 ಲಕ್ಷ ಮತ್ತು ರೂ.2.20 ಲಕ್ಷ ಸಾಮಗ್ರಿ ವೆಚ್ಚ ಬಳಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದು.
12. **ಕರಾವಳಿ ಮೀನುಗಾರಿಕಾ ಕಾಮಗಾರಿಗಳು:** ಮೀನು ಒಣಗಿಸುವ ಕಣಗಳ ನಿರ್ಮಾಣಕ್ಕೆ ರೂ.11,250/– ಅಕುಶಲ ಕೂಲಿ ಮೊತ್ತ ಹಾಗೂ ರೂ.63,750/– ಸಾಮಗ್ರಿ ವೆಚ್ಚ ನಿಗದಿಪಡಿಸಿದೆ.
13. **ಗ್ರಾಮೀಣ ಕುಡಿಯುವ ನೀರಿನ ವ್ಯವಸ್ಥೆಗೆ ಪುನಶ್ಚೇತನ:** ಜಲ ಮರು ಪೂರಣಕ್ಕಾಗಿ ಇಂಗು ಗುಂಡಿಗಳ ನಿರ್ಮಾಣಕ್ಕೆ ರೂ.1,000/– ಅಕುಶಲ ಕೂಲಿ ಮೊತ್ತ ಹಾಗೂ ರೂ. .1,000/– ಸಾಮಗ್ರಿ ವೆಚ್ಚ ಮತ್ತು ಕೊಳವೆ ಬಾವಿ ಮರು ಪೂರಣ ವ್ಯವಸ್ಥೆಗಾಗಿ ರೂ.2,500/– ಅಕುಶಲ ಕೂಲಿ ವೆಚ್ಚ ಹಾಗೂ ರೂ.2,500/– ಸಾಮಗ್ರಿ ವೆಚ್ಚ ಬಳಸಲು ಅವಕಾಶ ಕಲ್ಪಿಸಿದೆ.
14. **ಗ್ರಾಮೀಣ ನೈರ್ಮಲ್ಯ:** ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದ ಜೊತೆ ಸಮನ್ವಯಕ್ಕೆ ಅವಕಾಶ ಕಲ್ಪಿಸಲಾಗಿದೆ

| ಕ್ರ.ಸಂ | ವಿವರ | ಅಕುಶಲ ಕೂಲಿ | ಸಾಮಗ್ರಿ ವೆಚ್ಚ |
|---|---|---|---|
| 1 | ವೈಯುಕ್ತಿಕ ಶೌಚಾಲಯ | 3,100 | 1,400 |
| 2 | ಅಂಗನವಾಡಿ ಶೌಚಾಲಯ | 6,350 | 6,640 |
| 3 | ಶಾಲಾ ಶೌಚಾಲಯ | 3,500 | 31,500 |
| 4 | ಘನ–ದ್ರವ ತ್ಯಾಜ್ಯಾ ವಿಲೇವಾರಿ ಘಟಕ | 1,75,000 | 3,25,000 |

15. ವಿಶೇಷ ಸಂದರ್ಭಗಳಲ್ಲಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರ ಅಧಿಸೂಚಿಸಿರುವ ಇತರ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು.

- ಪ್ರತಿ ನೋಂದಾಯಿತ ಕುಟುಂಬಕ್ಕೆ ಒಂದು ಆರ್ಥಿಕ ವರ್ಷಕ್ಕೆ 100 ದಿನಗಳ ಉದ್ಯೋಗವನ್ನು ಕಡ್ಡಾಯವಾಗಿ ಒದಗಿಸಬೇಕು
- ವಾರವಾರಕ್ಕೂ ತಪ್ಪದೆ ಕೂಲಿಯನ್ನು ಪಾವತಿಸಬೇಕು. ಕಾರಣಾಂತರಗಳಿಂದ ತಡವಾದರೂ 15 ದಿನದ ಒಳಗಾಗಿಯಂತೂ ಪಾವತಿಸಲೇಬೇಕು.
- ಮಹಿಳೆ ಮತ್ತು ಪುರುಷರಿಗೆ ಸಮಾನ ಕೂಲಿ ನೀಡಬೇಕು.
- ಅಂಗವಿಕಲ ಮತ್ತು ವಯಸ್ಸಾದವರಿಗೆ ನಿಗದಿ ಪ್ರಮಾಣಕ್ಕಿಂತ ಸೇ.25ರಷ್ಟು ಕಡಿಮೆ ಕೆಲಸದ ಪ್ರಮಾಣವನ್ನು ಅಳವಡಿಸುವುದು.
- ಗ್ರಾಮ ಸಭೆಗಳನ್ನು ನಡೆಸಿ ಕಾಮಗಾರಿ ಆಯ್ಕೆ ಮಾಡಿಕೊಳ್ಳಬೇಕು.
- ಪೂರ್ವ ನಿಯೋಜಿತವಾಗಿ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಮೇಲಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು.
- ಗುತ್ತಿಗೆದಾರರ ಸಂಪೂರ್ಣ ನಿಷೇಧವಿದೆ.
- ಜನರು ಮಾಡಬಹುದಾದ ಕೆಲಸಗಳಿಗೆ ಯಂತ್ರಗಳ ಬಳಕೆ ನಿಷೇಧವಿದೆ.
- ಇಂಜಿನಿಯರ್ (ಜೆ.ಇ) / ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಾರ್ಯದರ್ಶಿ (ಸೆಕ್ರೆಟರಿ), ಕಂಪ್ಯೂಟರ್ ಆಪರೇಟರ್, ಉದ್ಯೋಗ ಮಿತ್ರ (ಕಾಯಕ ಬಂಧು) ಮುಂತಾದವರು ತ್ವರಿತಗತಿಯಲ್ಲಿ ತಮ್ಮ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಬೇಕು.

## ಕಾಯ್ದೆ ವಿರುದ್ಧ ಧೋರಣೆಗೆ ದಂಡವಿರುತ್ತದೆ

- ಈ ಕಾಯ್ದೆಯಡಿಯಲ್ಲಿ ಯೋಜನೆಯ ಅನುಷ್ಠಾನದ ವಿರುದ್ಧ ಧೋರಣೆ ತಳೆದರೆ ರೂ.1000/–ರವರೆಗೆ ದಂಡವಿಧಿಸಲು ಅವಕಾಶವಿದೆ.
- ಈ ಕಾಯ್ದೆಯನ್ನು ಸೂಕ್ತವಾಗಿ ಜಾರಿ ಮಾಡುವಲ್ಲಿ ಅಡ್ಡಿ ಆತಂಕಗಳು ಎದುರಾದಾಗ ಅಥವಾ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ಭ್ರಷ್ಟಾಚಾರ ನಡೆಸಿದಾಗ ಇದರ ವಿರುದ್ಧ ದೂರು ಸಲ್ಲಿಸಲು ಅವಕಾಶವಿರುತ್ತದೆ.
- ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದು ಕೊರತೆ ನಿವಾರಣೆ) ನಿಯಮಗಳು
- 2009ರಲ್ಲಿ ಅನ್ವಯವಾಗುವಂತೆ ಎಲ್ಲ ಬಗೆಯ ಸಮಸ್ಯೆಗಳನ್ನು ಪರಿಹರಿಕೊಳ್ಳಲು ಸಾಧ್ಯವಿದೆ. ಅವಶ್ಯಕತೆ ಇದ್ದಲ್ಲಿ ಕುಂದು ಕೊರತೆ ನಿವಾರಣಾ ಸಮಿತಿಗೆ ಮೊರೆ ಹೋಗಬಹುದು.

## ದೂರು ಸಲ್ಲಿಸುವ ಹಂತ

- ಗ್ರಾಮ ಮಟ್ಟದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ
- ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಣಾಧಿಕಾರಿ (ಇಒ)
- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ(ಸಿಇಒ)
- ರಾಜ್ಯಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಮೇರೆಗೆ ಆಯುಕ್ತರು.



## ಉದ್ಯೋಗ ಖಾತರಿ ಕಾಯ್ದೆಯಡಿಯಲ್ಲಿ ಬಳಸಲಾಗುವ ನಮೂನೆಗಳು

- ನಮೂನೆ–1: ಇದರಲ್ಲಿ ಕೆಲಸ ಮಾಡಲು ಸಿದ್ಧವಿರುವ ಕುಟುಂಬದ ವಯಸ್ಕ ಸದಸ್ಯರ ಹೆಸರು, ವಯಸ್ಸು, ವಿಳಾಸ, ವಿವರಗಳನ್ನು ತುಂಬಿ ದ್ವಿಪ್ರತಿಯಲ್ಲಿ ತಾವು ವಾಸವಿರುವ ಗ್ರಾಮ ಪಂಚಾಂಯಿತಿಗೆ ಸಲ್ಲಿಸುವುದು.